ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

ಸಂಖ್ಯೆ:ಕಾಶಿಇ/ಹೆಚ್‌ಆರ್‌ಎಂಎಸ್/ /2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು. ದಿನಾಂಕ: 10-06-2020.

**ಸುತ್ತೋಲೆ**

ವಿಷಯ:- ವೇತನ ಹಿಂಬಾಕಿ ಪಾವತಿಸುವ ಕುರಿತು.

ಉಲ್ಲೇಖ:- 1) ಆರ್ಥಿಕ ಇಲಾಖೆ ಸುತ್ತೋಲೆ ಸಂಖ್ಯೆ:ಆಇ/06/ಟಿಪಿಇ/2019, ದಿನಾಂಕ:03/01/2020.
2) ಆರ್ಥಿಕ ಇಲಾಖೆ ಸುತ್ತೋಲೆ ಸಂಖ್ಯೆ:ಆಇ/47/ಟಿಪಿಇ/2019, ದಿನಾಂಕ:20/03/2020.
3) ಈ ಕಚೇರಿ ಸುತ್ತೋಲೆ ಸಂಖ್ಯೆ:ಕಾಶಿಇ/ಆಯವ್ಯಯ/16/ಯುಬಾ/84/2020-21, ದಿನಾಂಕ:16-05-2020.

*****

ಸೂಚಿತ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಾಲೇಜು ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಈಗಾಗಲೇ 2019ನೇ ಅಕ್ಟೋಬರ್ ನಿಂದ ಖಜಾನೆ-2 ರಲ್ಲಿ ವೇತನವನ್ನು ಸೆಳೆಯಲಾಗುತ್ತಿದೆ. ಉಲ್ಲೇಖ (1)ರನ್ವಯ ಖಜಾನೆ-2ರ ವ್ಯಾಪ್ತಿಯಲ್ಲಿ ಅನುದಾನವಿಲ್ಲದಿದ್ದಲ್ಲಿ ವೇತನ ಸೆಳೆಯಲಾಗುವುದಿಲ್ಲ. ಹಿಂದಿನ ವರ್ಷದ ವೇತನ ಪಡೆಯಲು ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆಯಬೇಕಾಗಿರುತ್ತದೆ. ಆದ್ದರಿಂದ ವೇತನದ ಅನುದಾನದ ಪ್ರಸ್ತಾವನೆಯನ್ನು ಸಲ್ಲಿಸಿ ಬಾಕಿ ವೇತನ ಸೆಳೆಯಲು ಅವಕಾಶ ನೀಡದಂತೆ ಆಯಾ ತಿಂಗಳನಲ್ಲಿ ಕ್ಲೇಮು ಮಾಡಲು ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು ಹೊಣೆಗಾರರಾಗಿರುತ್ತಾರೆ.

ಬಡ್ತಿ, ಸ್ಥಾನೀಕರಣ, ಕಾಮಿಬ/ಸ್ವವೇಬ ಹಾಗೂ ಇತರೆ ಬಾಕಿಗೆ ಸಂಬಂಧಿಸಿದಂತೆ ಸದ್ಯದಲ್ಲೇ ಇಲಾಖಾ ವೆಬ್ ಸೈಟ್‌ನಲ್ಲಿ ಮಾಹಿತಿಯನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಿಕೊಡಲಾಗುವುದು. ಸದರಿ ಬಾಕಿ ವೇತನವನ್ನು ಸೆಳೆಯಲು ಉಲ್ಲೇಖ (2) ರನ್ವಯ ಸರ್ಕಾರದ ಪೂರ್ವಾನುಮತಿಯನ್ನು ಪಡೆದ ನಂತರವೇ ಪಾವತಿಸಬೇಕಾಗಿರುತ್ತದೆ. ಆದ್ದರಿಂದ ಇತರೆ ಬಾಕಿಗೆ ಸಂಬಂಧಿಸಿದಂತೆ, ಸರ್ಕಾರದ ಅನುಮತಿ ನೀಡುವವರೆಗೂ ಕೆ-2 ನಲ್ಲಿ ಅನುದಾನ ಬಿಡುಗಡೆಯಾದ ಹೊರತು ಹೆಚ್.ಆರ್.ಎಂ.ಎಸ್.ನಲ್ಲಿ Arrears screen ನಲ್ಲಿ send to K-2 screen ನ್ನು ಎನೇಬಲ್ ಮಾಡಲಾಗುವುದಿಲ್ಲ. ತತ್ಸಂಬಂಧ ಬಾಕಿ ವೇತನವನ್ನು HRMS ನಲ್ಲಿ Arrears screen ನಲ್ಲಿ send to K-2 ನ್ನು ಅಳವಡಿಸಲು ಪದೇ ಪದೇ ಪತ್ರವನ್ನು HRMS ವಿಭಾಗಕ್ಕೆ ಬರೆಯುವ ಅಗತ್ಯವಿರುವುದಿಲ್ಲ.

ಮುಂದುವರೆದು, 2016 ಯುಜಿಸಿ ಬಾಕಿ ಕ್ಲೇಮು ಸಂಬಂಧ pending arrears ನಲ್ಲಿ 39 ಕಾಲಂ ನ್ನು ಭರ್ತಿ ಮಾಡಿ approve ನೀಡತಕ್ಕದ್ದಲ್ಲ ಹಾಗೂ pending arrears request ನಲ್ಲಿ ಅಪ್ರೂವ್ ಆಗದೇ ಇರುವವರು ಸಹ ಮುಂದಿನ ಆದೇಶದವರೆಗೆ ಯಥಾಸ್ಥಿತಿ ಇರತಕ್ಕದ್ದು. ಮತ್ತು ಇತರೆ ವೇತನ ವ್ಯತ್ಯಾಸ ಹಾಗೂ ಎ.ಜಿ.ಪಿ. ಬಾಕಿ ವೇತನಕ್ಕಾಗಿ Arrears screen ನಲ್ಲಿ draft bill generate ಮಾಡುವ ಅಗತ್ಯವಿರುವುದಿಲ್ಲ.

ಕಾಲೇಜು ಶಿಕ್ಷಣ ನಿರ್ದೇಶಕರು.

ಪ್ರತಿಯನ್ನು

1) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲ್ಬುರ್ಗಿ - ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಸರ್ಕಾರಿ ಕಾಲೇಜು ಪ್ರಾಂಶುಪಾಲರುಗಳಿಗೆ - ಸೂಕ್ತ ಕ್ರಮಕ್ಕಾಗಿ
3) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸಲು
4) ಕಾಲೇಜು ಶಿಕ್ಷಣ ಆಯುಕ್ತರ/ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ/ಹೆಚ್ಚುವರಿ ನಿರ್ದೇಶಕರ ಆಪ್ತ ಶಾಖೆಗೆ – ಮಾಹಿತಿಗಾಗಿ
5) ಕಛೇರಿ ಪ್ರತಿ.